ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-7 Special Issue-3, March - April 2026, Pp. 94-99**
**©*IIMRD*, Mysuru**
IIMRD JOURNALS

**www.iimrd.com**

# ಬೆಳಗಾವಿ ಜಿಲ್ಲೆಯ ನೀರಾವರಿ ವ್ಯವಸ್ಥೆ

**ಮಾನಸ ಪೂಜಾರಿ**

ಸಹಾಯಕ ಪ್ರಾಧ್ಯಾಪಕರು, ಜಿ.ಎಫ್.ಜಿ.ಸಿ. ಪಾಶ್ಚಾಪುರ, ಹುಕ್ಕೇರಿ ತಾಲೂಕು, ಬೆಳಗಾವಿ ಜಿಲ್ಲೆ

**ಸಾರಾಂಶ: (Abstract)**

*ಕುಂದಾನಗರಿ ಎಂದೇ ಹೆಸರುವಾಸಿಯಾದ ಬೆಳಗಾವಿ ಜಿಲ್ಲೆಯ ನೀರಾವರಿ ಇತಿಹಾಸವು, ಪ್ರಾಚೀನ ಕಾಲದ ಸಾಂಪ್ರದಾಯಿಕ ಪದ್ಧತಿಗಳಿಂದ ಆಧುನಿಕ ಬೃಹತ್ ಯೋಜನೆಗಳವರೆಗೆ ಬೆಳೆದು ಬಂದ ಒಂದು ರೋಚಕ ಪ್ರಯಾಣವಾಗಿದೆ. ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ನದಿಗಳ ಜಲಾನಯನ ಪ್ರದೇಶದಲ್ಲಿರುವ ಈ ಜಿಲ್ಲೆಯು ಭೌಗೋಳಿಕವಾಗಿ ಸಮೃದ್ಧವಾಗಿದ್ದು, ಆರಂಭಿಕ ಕಾಲದಲ್ಲಿ ಕದಂಬರು ಮತ್ತು ಚಾಲುಕ್ಯರಂತಹ ರಾಜವಂಶಗಳು ಕೆರೆ ಮತ್ತು ಬಾವಿಗಳ ನಿರ್ಮಾಣದ ಮೂಲಕ ಕೃಷಿಗೆ ಆಸರೆ ನೀಡಿದ್ದರು. ಕಾಲಾನಂತರದಲ್ಲಿ, ಬ್ರಿಟಿಷ್ ಆಡಳಿತಾವಧಿಯಲ್ಲಿ ನೀರಾವರಿ ವ್ಯವಸ್ಥೆಯು ಕೇವಲ ಜೀವನೋಪಾಯಕ್ಕಾಗಿ ಉಳಿಯದೆ ವಾಣಿಜ್ಯ ಬೆಳೆಗಳ ಬೆಳವಣಿಗೆಗಾಗಿ ವ್ಯವಸ್ಥಿತ ರೂಪ ಪಡೆಯಿತು. ಸ್ವಾತಂತ್ರ್ಯದ ನಂತರ ಜಾರಿಗೆ ಬಂದ ಬೃಹತ್ ಅಣೆಕಟ್ಟು ಯೋಜನೆಗಳು ಜಿಲ್ಲೆಯ ನೀರಾವರಿ ನಕ್ಷೆಯನ್ನೇ ಬದಲಿಸಿದ್ದು, ಇದು ಕೇವಲ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು ಮಾತ್ರವಲ್ಲದೆ, ಜಿಲ್ಲೆಯ ಸಕ್ಕರೆ ಉದ್ಯಮದ ಬೆಳವಣಿಗೆ ಮತ್ತು ಸಾಮಾಜಿಕ–ಆರ್ಥಿಕ ಸ್ಥಿತ್ಯಂತರಕ್ಕೆ ಪ್ರಬಲ ಕಾರಣವಾಯಿತು. ಈ ನನ್ನ ಲೇಖನವು ನೀರಾವರಿಯು ಅಂದರೆ ನೈಸರ್ಗಿಕ ಜಲಸಂಪನ್ಮೂಲಗಳು ಮಾನವ ನಿರ್ಮಿತ ಕೃತಕ ತಂತ್ರಜ್ಞಾನದೊಂದಿಗೆ ಸೇರಿಕೊಂಡು ಯಾವ ರೀತಿಯಾಗಿ ಬೆಗಾವಿ ಜಿಲ್ಲೆಯ ಅಭಿವೃದ್ಧಿಯನ್ನು ರೂಪಿಸುತ್ತಿದೆ ಎಂಬುದನ್ನು ಕುರಿತು ಚರ್ಚಿಸುತ್ತದೆ.*

**ಮುಖ್ಯಪದಗಳು (Keywords):** *ಬೆಳಗಾವಿ ಜಿಲ್ಲೆ, ನೀರಾವರಿ ವ್ಯವಸ್ಥೆ, ಜಲಾನಯನ ಪ್ರದೇಶ.*

## ಪೀಠಿಕೆ

ಬೆಳಗಾವಿಯು ಕರ್ನಾಟಕ ರಾಜ್ಯದ ವಾಯುವ್ಯ ಭಾಗದಲ್ಲಿರುವ ಅತಿ ದೊಡ್ಡ ಜಿಲ್ಲೆ ಹಾಗೂ ಕರ್ನಾಟಕದ ಎರಡನೇ ರಾಜಧಾನಿಯಾಗಿದೆ. ಬೆಳಗಾವಿ ವಿಭಾಗವು ಕರ್ನಾಟಕದ ಆಡಳಿತ ವಿಭಾಗಗಳಲ್ಲಿ ಒಂದಾಗಿರುವ ಕಾರಣದಿಂದ ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧವನ್ನು ನಿರ್ಮಿಸಲಾಗಿದೆ. ಬೆಳಗಾವಿಯು ರಟ್ಟ ರಾಜವಂಶದವರಿಂದ ಸ್ಥಾಪಿತವಾಗಿದ್ದು, ಜೈನರ ನೇಮಿನಾಥನಿಗೆ ಸಮರ್ಪಿತವಾದ ಕಮಲ ಬಸದಿಯು ಇಲ್ಲಿದೆ. ಬೆಳಗಾವಿ ಜಿಲ್ಲೆಯ ಮೂಲ ಹೆಸರು ವೇಣುಗ್ರಾಮ ಎಂದು ಅಂದರೆ ಬಿದಿರಿನ ಗ್ರಾಮ, ಬಿದಿರಿನ ನಗರ ಎಂಬ ಅರ್ಥ ಸೂಚಿಸುತ್ತದೆ. ಬೆಳಗಾವಿಯು ಯಾದವ ರಾಜವಂಶ, ಹಲವು ಇಸ್ಲಾಂ ಸಾಮ್ರಾಜ್ಯಗಳು ಮತ್ತು ಇನ್ನಿತರೆ ರಾಜವಂಶಗಳು ಸೇರಿದಂತೆ ವಿಜಯನಗರ ಸಾಮ್ರಾಜ್ಯದ

*Please cite this article as:* ಮಾನಸ ಪೂಜಾರಿ. (2026). ಬೆಳಗಾವಿ ಜಿಲ್ಲೆಯ ನೀರಾವರಿ ವ್ಯವಸ್ಥೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 94–99

ಆಡಳಿತಕ್ಕೂ ಒಳಪಟ್ಟಿತ್ತು.[1] ವೈವಿಧ್ಯಮಯ ಭೌಗೋಳಿಕ ಲಕ್ಷಣಗಳನ್ನು ಹೊಂದಿರುವ ಬೆಳಗಾವಿ ಜಿಲ್ಲೆಯು ನೀರಾವರಿಯ ಮೂಲ ಸೌಲಭ್ಯಗಳನ್ನು ನೈಸರ್ಗಿಕವಾಗಿ ಹಾಗೂ ಕೃತಕವಾಗಿ ಪಡೆದುಕೊಂಡು ಕೃಷಿಯ ಚಟುವಟಿಕೆಗಳಲ್ಲಿ ತನ್ನದೇ ಆದ ಸ್ಥಾನ ಪಡೆದುಕೊಂಡು ಅಭಿವೃದ್ಧಿಶೀಲ ಜಿಲ್ಲೆಯಾಗಿ ಪರಿವರ್ತನೆಯಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ನೀರಾವರಿ ಮೂಲಗಳು ಆಗಿವೆ. ಬೆಳಗಾವಿ ಜಿಲ್ಲೆಯಲ್ಲಿನ ಕೆರೆಗಳು, ನದಿಗಳು, ಕಾಲುವೆಗಳು, ತೆರೆದ ಬಾವಿಗಳು, ಕೊಳವೆ ಬಾವಿಗಳು, ಅಣೆಕಟ್ಟುಗಳು ಸಾಮಾನ್ಯವಾಗಿ ನೀರಿನ ಆಸರೆಗಳಾಗಿವೆ.

ಈ ಜಿಲ್ಲೆಯಲ್ಲಿ ಕೃಷ್ಣಾ ನದಿ ಹಾಗೂ ಅದರ ಉಪನದಿಗಳಾದ ಘಟಪ್ರಭಾ, ಮಲಪ್ರಭಾ, ಮಾರ್ಕಂಡೇಯ, ಹಿರಣ್ಯಕೇಶಿ, ಮಹದಾಯಿ, ಕಾಳಿ ಮುಂತಾದ ನದಿಗಳು ಹರಿಯುತ್ತವೆ. ಇವುಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ, ಸಂಗ್ರಹವಾದ ನೀರಿಗೆ ಕೃತಕ ಪೈಪುಗಳು ಮತ್ತು ಕಾಲುವೆಗಳ ಮೂಲಕ ಕೃಷಿಗೆ ನೀರನ್ನು ಪೂರೈಸಿ, ಬೆಳೆಗಳನ್ನು ಬೆಳೆಯುತ್ತಾರೆ. ಜಿಲ್ಲೆಯ ಶೇಕಡ 50ಕ್ಕಿಂತ ಹೆಚ್ಚಿನ ಭೂಮಿಯು ನೀರಾವರಿ ಸೌಲಭ್ಯಗಳನ್ನು ಪಡೆದುಕೊಂಡು ಕೃಷಿಯಲ್ಲಿ ಮುಂದುವರಿಯುತ್ತಿರುವ ಜಿಲ್ಲೆಯಾಗಿದೆ. ಮೆಕ್ಕೆಜೋಳ, ಭತ್ತ, ಹತ್ತಿ, ಜೋಳ, ಕಬ್ಬು, ಶೇಂಗಾ, ಸೂರ್ಯಕಾಂತಿ, ತಂಬಾಕು, ನವಣೆ, ಅವರೆ, ಅರಿಶಿಣ, ಬದನೆ, ಈರುಳ್ಳಿ, ಬಾಳೆ ಇಲ್ಲಿ ಸಾಮಾನ್ಯವಾಗಿ ಬೆಳೆಯುವ ಪ್ರಮುಖ ಬೆಳೆಗಳಾಗಿವೆ. ಹೀಗೆ ರೈತರು ನೀರಾವರಿ ಅನುಕೂಲ ಪಡೆದುಕೊಂಡು ಹಲವು ಬೆಳೆಗಳ ಕೃಷಿಯನ್ನು ಮಾಡುತ್ತಾರೆ. ಬೆಳಗಾವಿ ಜಿಲ್ಲೆಯು ಹದಿನೈದು ತಾಲೂಕುಗಳನ್ನು ಹೊಂದಿದ್ದು, ಅಥಣಿ, ಬೈಲಹೊಂಗಲ, ಬೆಳಗಾವಿ, ಚಿಕ್ಕೋಡಿ, ಗೋಕಾಕ್, ಹುಕ್ಕೇರಿ, ಖಾನಾಪುರ, ರಾಯಭಾಗ, ರಾಮದುರ್ಗ, ಸವದತ್ತಿ, ಕಾಗವಾಡ, ನಿಪ್ಪಾಣಿ, ಯರಗಟ್ಟಿ, ಮೂಡಲಗಿ, ಕಿತ್ತೂರು ಇವು ಇಲ್ಲಿನ ತಾಲೂಕುಗಳಾಗಿವೆ. ಈ ಜಿಲ್ಲೆಯು 2011 ರ ಜನಗಣತಿಯ ಪ್ರಕಾರ 47,79,661 ಜನಸಂಖ್ಯೆಯನ್ನು ಹೊಂದಿದೆ.[2]

**ಸಂಶೋಧನಾ ವಿಧಾನ**

ಅಧ್ಯಯನ ವಿಧಾನವನ್ನು ಒಳಗೊಂಡಿರುವ ಸಂಶೋಧನೆಯು ಬಹು ಮುಖ್ಯ ಶೋಧನೆಯಾಗುತ್ತದೆ. ವೈಜ್ಞಾನಿಕ ಮತ್ತು ಸುವ್ಯವಸ್ಥಿತವಾದ ವಿಧಾನ, ವಿವಿಧ ಹಿನ್ನೆಲೆಯನ್ನು ಇಟ್ಟುಕೊಂಡು ಪ್ರಸ್ತುತ ಸಂಶೋಧನಾ ಲೇಖನವನ್ನು ರಚಿಸಲಾಗಿದೆ. ಈ ಲೇಖನವನ್ನು ಸಿದ್ಧಪಡಿಸಲು ಗ್ರಂಥಗಳ ಪರಾಮರ್ಶೆ, ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳು, ಕ್ಷೇತ್ರಕಾರ್ಯ, ರೈತರೊಂದಿಗೆ ಸಂದರ್ಶನ ಮತ್ತು ವೈಯಕ್ತಿಕವಾಗಿ ವಿಷಯ ವಸ್ತುವಿನ ತಿಳುವಳಿಕೆ ಮಟ್ಟದ ದೃಷ್ಟಿಯಿಂದ ರಚಿಸಿರುತ್ತೇನೆ.

**ಬೆಳಗಾವಿ ಜಿಲ್ಲೆಯ ನೀರಾವರಿ ಮೂಲಗಳು**

***ತೆರೆದ ಬಾವಿಗಳು ಮತ್ತು ಕೊಳವೆಬಾವಿಗಳು:*** ಬೆಳಗಾವಿ ಜಿಲ್ಲೆಯು ಸಾಮಾನ್ಯವಾಗಿ ಸಾಂಪ್ರದಾಯಿಕವಾಗಿ ಬಂದ ಬಾವಿ ನೀರಾವರಿ ಸೌಕರ್ಯಗಳನ್ನು ಹೊಂದಿದ್ದು, ಇದು ಈ ಜಿಲ್ಲೆಯ ವ್ಯಾಪ್ತಿ ಪ್ರದೇಶದಲ್ಲಿನ ನೀರಾವರಿಯ ಪ್ರಾಥಮಿಕ ನೀರಿನ ಮೂಲವಾಗಿದೆ. ಈ ಜಿಲ್ಲೆಯು ದೊಡ್ಡ ಸಂಖ್ಯೆಯಲ್ಲಿ ತೆರೆದ ಮತ್ತು ಕೊಳವೆ ಬಾವಿಗಳನ್ನು ಹೊಂದಿದ್ದು, ಕೃಷಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ.[3]

***ಕಾಲುವೆಗಳು (ನಾಲೆಗಳು):*** ನದಿಗಳಿರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಅಣೆಕಟ್ಟುಗಳನ್ನು ನಿರ್ಮಿಸಿಕೊಂಡು ಅದರಿಂದ ನಾಲೆಗಳ ಅಥವಾ ಕಾಲುವೆಗಳ ಮೂಲಕ ನೀರು ಸರಬರಾಜು ಮಾಡಿಕೊಂಡು, ಜಿಲ್ಲೆಯಲ್ಲಿ ಕೃಷಿಗೆ, ಕುಡಿಯಲು ಹಾಗೂ ಕೈಗಾರಿಕೆಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಸಹ ಬೆಳಗಾವಿ ಜಿಲ್ಲೆಯ ಪ್ರಮುಖ ನೀರಾವರಿ ಮೂಲವಾಗಿದೆ.

***ಕೆರೆಗಳು:*** ಬೆಳಗಾವಿ ಜಿಲ್ಲೆಯಲ್ಲಿ ಕೆರೆ ನೀರಾವರಿಯು ಇಂದು ಕೊನೆಯ ಸ್ಥಾನದಲ್ಲಿದ್ದರೂ, ರೈತರು ಅದರ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುತ್ತಾರೆ ಹಾಗೂ ಜಾನುವಾರುಗಳಿಗೆ ಕುಡಿಯಲು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಸಹ ಬೆಳಗಾವಿ ಜಿಲ್ಲೆಯ ನೀರಾವರಿ ಮೂಲವಾಗಿದೆ.

***ಅಂತರ್ಜಲ ಮತ್ತು ಬುಗ್ಗೆ (Springs) ವ್ಯವಸ್ಥೆ:*** ಬೆಳಗಾವಿ ಜಿಲ್ಲೆಯು ಭೌಗೋಳಿಕವಾಗಿ 'ಡೆಕ್ಕನ್ ಟ್ರ್ಯಾಪ್' ಎಂಬ ವಿಶಿಷ್ಟ ಶಿಲಾಪದರಗಳಿಂದ ಕೂಡಿದ್ದು, ಇಲ್ಲಿನ ಬಸಾಲ್ಟ್ ಶಿಲೆಗಳ ಮಧ್ಯೆ ಇರುವ ಬಿರುಕುಗಳು ಮತ್ತು ಮಣ್ಣಿನ ಪದರಗಳ ವಿಶೇಷತೆಯಿಂದಾಗಿ ಜಿಲ್ಲೆಯಾದ್ಯಂತ ಬಹಳಷ್ಟು ನೈಸರ್ಗಿಕ ಬುಗ್ಗೆಗಳು ಸೃಷ್ಟಿಯಾಗಿವೆ. ಐತಿಹಾಸಿಕವಾಗಿ ಈ ಬುಗ್ಗೆಗಳನ್ನು 'ಜಲಮೂಲ'ಗಳೆಂದು ಪೂಜಿಸಲಾಗುತ್ತಿತ್ತು. ಹಲವಾರು ಹಳ್ಳಿಗಳಲ್ಲಿ ಈ ಚಿಲುಮೆಗಳ ಸುತ್ತಲೂ ಸುಂದರವಾದ ಕಲ್ಲಿನ ಕಟ್ಟೆಗಳನ್ನು ಅಥವಾ 'ಪುಷ್ಕರಣಿ'ಗಳನ್ನು ನಿರ್ಮಿಸಿ, ಕುಡಿಯುವ ನೀರಿಗಾಗಿ ಬಳಸಲಾಗುತ್ತಿತ್ತು. ಪಶ್ಚಿಮ ಘಟ್ಟದ ಅಂಚಿನಲ್ಲಿರುವ ಕಾಡುಗಳಲ್ಲಿನ ಚಿಲುಮೆಗಳು ಇಂದಿಗೂ ಅನೇಕ ಕುಗ್ರಾಮಗಳ ಏಕೈಕ ಜಲಮೂಲಗಳಾಗಿವೆ. ಅಷ್ಟೇ ಅಲ್ಲದೇ ಇವುಗಳು ವರ್ಷಪೂರ್ತಿ ಹರಿಯುವ ಸಣ್ಣ ತೊರೆಗಳನ್ನು ಸೃಷ್ಟಿಸುತ್ತವೆ. ಇವು ಕೇವಲ ಕೃಷಿಗೆ ನೀರು ಒದಗಿಸುವುದು ಮಾತ್ರವಲ್ಲದೇ, ಸ್ಥಳೀಯ ಜೀವವೈವಿಧ್ಯತೆಯನ್ನು ಕಾಪಾಡುವಲ್ಲಿ ಮುಖ್ಯ ಪಾತ್ರವಹಿಸುತ್ತಿವೆ. ವಿಶೇಷವಾಗಿ ಬೇಸಿಗೆ ಕಾಲದಲ್ಲಿ ನದಿಗಳು ಬತ್ತಿದಾಗಲೂ, ಈ ಬುಗ್ಗೆಗಳು ರೈತರ ಕೈಹಿಡಿಯುತ್ತವೆ. ಇತ್ತೀಚಿನ ಸಂಶೋಧನೆಯ ಪ್ರಕಾರ, ಬೆಳಗಾವಿ ಜಿಲ್ಲೆಯು ಒಟ್ಟು 59 ಬುಗ್ಗೆಗಳನ್ನು ಹೊಂದಿದ್ದು, ಕರ್ನಾಟಕದಲ್ಲಿಯೇ ಅತಿ ಹೆಚ್ಚು ನೈಸರ್ಗಿಕ ಬುಗ್ಗೆಗಳನ್ನು ಹೊಂದಿರುವ ಜಿಲ್ಲೆಯಾಗಿದೆ. ಇದು ಇಲ್ಲಿನ ಅಂತರ್ಜಲ ಮಟ್ಟದ ಐತಿಹಾಸಿಕ ಸಮೃದ್ಧಿಯನ್ನು ಸೂಚಿಸುತ್ತದೆ.[4] ಈ ಜಿಲ್ಲೆಯ ಖಾನಾಪುರ, ಬೆಳಗಾವಿ ಮತ್ತು ಪಶ್ಚಿಮ ಘಟ್ಟದ ಪಾದದ ತಪ್ಪಲಿನಲ್ಲಿರುವ ತಾಲ್ಲೂಕುಗಳಲ್ಲಿ ಇವು ಅತಿ ಹೆಚ್ಚು ಕಂಡುಬರುತ್ತವೆ.

**ಬೆಳಗಾವಿ ಜಿಲ್ಲೆಯಲ್ಲಿರುವ ಪ್ರಮುಖ ಜಲಾಶಯಗಳು :**

ಬೆಳಗಾವಿ ಜಿಲ್ಲೆಯಲ್ಲಿನ ಜಲಾಶಯಗಳು ಸಾಮಾನ್ಯವಾಗಿ ಸಂಗ್ರಹಣೆಯ ಮಟ್ಟ ಹಾಗೂ ಗುರಿ ಉದ್ದೇಶಗಳ ಆಧಾರದ ಮೇಲೆ ಬೃಹತ್ ಅಣೆಕಟ್ಟುಗಳಾಗಿ ವಿಂಗಡಿಸಲಾಗಿದೆ. ಸಣ್ಣ ನೀರಾವರಿ ಮತ್ತು ಪ್ರಮುಖ ನೀರಾವರಿಯ ವಿವಿಧ ಕಾರ್ಯ ಯೋಜನೆಗಳ ಮೂಲಕ ಸೌಲಭ್ಯಗಳನ್ನೂ ಒದಗಿಸುತ್ತಿರುವ, ಘಟಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಹಿಡಕಲ್ ಡ್ಯಾಮ್ ಹಾಗೂ ರೇಣುಕಾಸಾಗರ (ಮಲಪ್ರಭಾ ಜಲಾಶಯ )ಇಂತಹ ಡ್ಯಾಮ್‌ಗಳನ್ನು ನೀರಾವರಿ ಹಾಗೂ ವಿದ್ಯುತ್ ಉತ್ಪಾದನಾ ಯೋಜನೆಗಳಾಗಿ ಗುರುತಿಸಲ್ಪಟ್ಟಿದೆ. ಸಾಮಾನ್ಯವಾಗಿ ಜಲಾಶಯಗಳ ಶೇಖರಣೆ ಆಧಾರದ ಮೇಲೆ ಹಲವು ಯೋಜನೆಗಳನ್ನು ಹಾಕಿಕೊಂಡು ನೀರಾವರಿಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಹಿಡ್ಕಲ್ ಡ್ಯಾಂ ಮಲಪ್ರಭಾ ನದಿಗೆ ನಿರ್ಮಿಸಲಾಗಿದ್ದು ಗುರುತ್ವಾಕರ್ಷಣೆ ಮಾದರಿಯ ಡ್ಯಾಮ್ ಆಗಿದೆ. ಈ ಜಲಾಶಯದ ಮುಖ್ಯ ಉದ್ದೇಶ

ನೀರಾವರಿಯ ಸೌಲಭ್ಯಗಳನ್ನು ವ್ಯವಸಾಯಕ್ಕೆ, ಕುಡಿಯಲು ಮತ್ತು ಜಲ ವಿದ್ಯುತ್ ಉತ್ಪಾದಿಸಲು ಇಲ್ಲಿನ ನೀರನ್ನು ಉಪಯೋಗಿಸಿಕೊಳ್ಳುವುದಾಗಿದೆ. ರೇಣುಕಾ ಸಾಗರ ಈ ಜಲಾಶಯವನ್ನು ಮಲಪ್ರಭಾ ಜಲಾಶಯ ಎಂದೂ ಕರೆಯಲಾಗುತ್ತದೆ. ಈ ಜಲಾಶಯದ ನೀರನ್ನು ಕೃಷಿ ಬಳಕೆಗೆ, ಕುಡಿಯಲು ಹಾಗೂ ಜಲವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಒಳಗೊಂಡಿದೆ. ಮಲಪ್ರಭಾ ಅಣೆಕಟ್ಟು ಇಲ್ಲಿಯೂ ಸಹ ನೀರನ್ನು ಕೃಷಿಗೆ ಬಳಸಿಕೊಳ್ಳಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಮೂಲಭೂತವಾಗಿ ಜಲಾಶಯಗಳನ್ನು ದೊಡ್ಡಮಟ್ಟದ ಹಾಗೂ ವಿವಿಧ ಬಹುಪಯೋಗಿ ಯೋಜನೆಗಳಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಬೆಳಗಾವಿ ಜಿಲ್ಲೆಯ ಪ್ರದೇಶವಾರು ಕೃಷಿಯ ಉತ್ಪಾದನೆಯ ಖಾರೀಫ್ ಬೆಳೆಯು 6.40976 ಲಕ್ಷ  ಹಾಗೂ ರಬಿ ಬೆಳೆಯು 3.00917 ಲಕ್ಷ  ಎಕರೆ ಪ್ರದೇಶದಲ್ಲಿ ಒಟ್ಟಾಗಿ 9,50,874ರಷ್ಟು ನೀರಾವರಿಯ ಸ್ಥಿತಿಯ ಅನುಕೂಲವನ್ನು ಪಡೆದುಕೊಂಡಿದೆ.

ಘಟಪ್ರಭಾ ನದಿ ಜಲಾಶಯದ ಜಿ.ಎಲ್.ಬಿ ಕಾಲುವೆ ಮೂಲಗಳಿಂದ 86,528 ಎಕರೆ[5] ಹಾಗೂ ಘಟಪ್ರಭಾ ಪ್ರಾಜೆಕ್ಟ್ ಯೋಜನೆಗಳಿಂದ 1,75,110 ಎಕರೆ ಹಾಗೂ ಮಾರ್ಕಂಡೇಯ ಯೋಜನೆಯಿಂದ 14,448 ಎಕರೆ, ದೂದ್ ಗಂಗಾ ಯೋಜನೆಯಿಂದ 15,167 ಎಕರೆಯಷ್ಟು ಪ್ರಮುಖ ನೀರಾವರಿ ಯೋಜನೆಗಳಿಂದ ಸೌಲಭ್ಯ ಕಲ್ಪಿಸಲಾಗಿದೆ. ಬಳ್ಳಾರಿ ನಾಲಾ ಪ್ರಾಜೆಕ್ಟ್ ನಿಂದ 8,200 ಎಕರೆ, ಕಿನಿಯಿ ಪ್ರಾಜೆಕ್ಟ್ ನಿಂದ 1200 ಎಕರೆಯಷ್ಟು ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಬೆಳಗಾವಿಯಲ್ಲಿನ ಪ್ರಮುಖ ಏತ ನೀರಾವರಿ ಯೋಜನೆಗಳು: ಜಿಲ್ಲೆಯ ಉತ್ತರ ಭಾಗದ ಕೃಷ್ಣಾ ನದಿಯ ದಂಡೆಯ ರೈತರು ಸಹಕಾರಿ ತತ್ವದ ಅಡಿಯಲ್ಲಿ 'ಏತ ನೀರಾವರಿ' ವ್ಯವಸ್ಥೆಯನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದಿದ್ದಾರೆ. ಇದು ಕರ್ನಾಟಕದ ನೀರಾವರಿ ಇತಿಹಾಸದಲ್ಲಿ ಒಂದು ವಿಶಿಷ್ಟ ಮಾದರಿಯಾಗಿದೆ. ಇದರಲ್ಲಿ ಪ್ರಮುಖವಾದವುಗಳೆಂದರೆ ರಾಮೇಶ್ವರ ಏತ ನೀರಾವರಿ ಯೋಜನೆ, ಹಿಪ್ಪರಗಿ ಪ್ರಾಜೆಕ್ಟ್, ತುಬುಚಿ, ಬಬಲೇಶ್ವರ, ಚಚಡಿ ಯೋಜನೆಗಳು ಹಾಗೂ ಹೊಸ ಯೋಜನೆಗಳಾದ ವೀರಭದ್ರೇಶ್ವರ, ಮುರುಗೋಡ್ ಯೋಜನೆ, ಮಹಾಲಕ್ಷ್ಮಿ, ಸೋಲಾಪುರ್ ಏತ ನಿರಾವರಿ, ಹತ್ತರಗಿ ಏತ ನೀರಾವರಿ, ಗೋಡಚಿನಮಲ್ಕಿ, ಮೇಲ್ಮಟ್ಟಿ ಏತ ನೀರಾವರಿ, ಸತ್ತಿಗೇರಿ ಏತ ನೀರಾವರಿ, ಕಾರ್ಗಾರ್ಂನ್ ಏತ ನೀರಾವರಿ, ಲಿಫ್ಟ್ ಆಫ್ ವಾಟರ್ ಟು ಚಿಕ್ಕೋಡಿ ಆಂಡ್ ಕೆನಾಲ್ ಫ್ರಮ್ ಕೃಷ್ಣಾ ರಿವರ್, ಶಂಕರಲಿಂಗ ಏತ ನೀರಾವರಿ (ಹುಕ್ಕೇರಿ), ಅಡವಿ ಸಿದ್ಧೇಶ್ವರ ಏತ ನೀರಾವರಿ ಯೋಜನೆ (ಹುಕ್ಕೇರಿ), ಹೀಗೆ ಅನೇಕ ಸಣ್ಣ ಏತ ನೀರಾವರಿ ಯೋಜನೆಗಳ ಮೂಲಕವೂ ಕೂಡಾ ಬೆಳಗಾವಿ ಜಿಲ್ಲೆಯಲ್ಲಿ ಕೃಷಿಗೆ ನೀರಾವರಿಯನ್ನು ಒದಗಿಸಲಾಗುತ್ತಿದೆ. ಕೆಲವು ನೀರಾವರಿ ಯೋಜನೆಯ ಕಾಮಗಾರಿಗಳು ಪ್ರಸ್ತುತ ಸ್ಥಿತಿಯಲ್ಲೂ ಮುಂದುವರೆಯುತ್ತಿವೆ.

**ಜಿಲ್ಲೆಯ ನೀರಾವರಿಯಲ್ಲಿ ಇತ್ತೀಚಿನ ಬೆಳವಣಿಗೆ:** ಇತ್ತೀಚಿನ ಸರ್ಕಾರಿ ಅಂಕಿಅಂಶಗಳ ಪ್ರಕಾರ, ಸೂಕ್ಷ್ಮ ನೀರಾವರಿ (Micro irrigation) ಪದ್ಧತಿಯು ಅತಿ ಹೆಚ್ಚು ಅಂದರೆ ಶೇಕಡಾ 52.26ರಷ್ಟು (5,40,000 ಹೆಕ್ಟೇರ್) ಭಾಗವನ್ನು ಆವರಿಸುವ ಮೂಲಕ ಪ್ರಮುಖ ಸ್ಥಾನದಲ್ಲಿದೆ. ಭೂಗರ್ಭ ಜಲದ ಬಳಕೆಯಲ್ಲಿ ಕೊಳವೆ ಬಾವಿಗಳು 16.23% ಮತ್ತು ತೆರೆದ ಬಾವಿಗಳು 14.35% ಗಮನಾರ್ಹ ಕೊಡುಗೆ ನೀಡುತ್ತಿವೆ.

ಕಾಲುವೆಗಳ ಮೂಲಕ ಶೇಕಡಾ 7.52 ರಷ್ಟು ಕೃಷಿ ಭೂಮಿಗೆ ನೀರು ಹರಿಯುತ್ತಿದ್ದರೆ, ಏತ ನೀರಾವರಿ ಮತ್ತು ಇತರ ಮೂಲಗಳು ಕ್ರಮವಾಗಿ ಶೇಕಡಾ 1.71 ಮತ್ತು ಶೇಕಡಾ 7.90ರಷ್ಟು ಪಾಲನ್ನು ಹೊಂದಿವೆ. ಅತ್ಯಂತ ಕಡಿಮೆ ಪಾಲು ಕೆರೆಗಳದ್ದಾಗಿದ್ದು 0.03%, ಒಟ್ಟಾರೆಯಾಗಿ ಜಿಲ್ಲೆಯು ಸುಧಾರಿತ ನೀರಾವರಿ ತಂತ್ರಜ್ಞಾನಗಳ ಮೇಲೆ ಹೆಚ್ಚಿನ ಅವಲಂಬನೆ ಹೊಂದಿರುವುದು ಈ ದತ್ತಾಂಶದಿಂದ ಸ್ಪಷ್ಟವಾಗುತ್ತದೆ.[6]

**ಉಪಸಂಹಾರ**

ಬೆಳಗಾವಿ ಜಿಲ್ಲೆಯು ಕರ್ನಾಟಕದ ಪ್ರಮುಖ ಕೃಷಿ ಜಿಲ್ಲೆಗಳಲ್ಲಿ ಒಂದಾಗಿದ್ದು, ಈ ಜಿಲ್ಲೆಯಲ್ಲಿ ಕೃಷ್ಣಾ ನದಿಯ ಹಲವು ಉಪನದಿಗಳ ನೀರಾವರಿಯ ಅನುಕೂಲತೆ ಇರುವುದರಿಂದ ಬಹು ಪಾಲಿನ ಭೂಮಿಯು ನೀರಾವರಿಯ ಸೌಲಭ್ಯವನ್ನು ಪಡೆದುಕೊಂಡಿದೆ. ಹಾಗೂ ಕೃಷಿ ಕ್ಷೇತ್ರದಲ್ಲಿ ರಾಜ್ಯಕ್ಕೆ ಮತ್ತು ದೇಶಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. ಈ ಜಿಲ್ಲೆಯಲ್ಲಿ ಬೆಳೆಯುವ ಬೆಳೆಗಳಾದ ಕಬ್ಬು. ಜೋಳ, ಮೆಕ್ಕೆಜೋಳ, ಭತ್ತ ಹೀಗೆ ಹಲವಾರು ವಾಣಿಜ್ಯ ಮತ್ತು ಆಹಾರ ಬೆಳೆಗಳು ರಾಜ್ಯದ ಆರ್ಥಿಕತೆಗೆ ತನ್ನದೇ ಆದ ಕೊಡುಗೆ ನೀಡುತ್ತಿವೆ. ಇಲ್ಲಿ ಹರಿಯುವ ನದಿಗಳಿಂದ ವ್ಯವಸ್ಥಿತವಾದ ಹಲವಾರು ನೀರಾವರಿ ಯೋಜನೆಗಳಿಂದ ನೀರನ್ನು ಸದುಪಯೋಗಪಡಿಸಿಕೊಳ್ಳಬೇಕು ಹಾಗೂ ಹಲವು ನೀರಾವರಿ ಯೋಜನೆಗಳಿಂದ ಜಾನುವಾರುಗಳು ಕಾಲುವೆಗಳಿಗೆ ಬಿದ್ದು ಪ್ರಾಣವನ್ನು ಕಳೆದುಕೊಳ್ಳುವುದರಿಂದ ಅವುಗಳು ಬರದಂತೆ ತಡೆಗೋಡೆಗಳು ಅಥವಾ ಬೇಲಿಗಳನ್ನು ನಿರ್ಮಿಸಬೇಕು ಜೊತೆಗೆ ನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳುವುದು ಹಾಗೂ ನದಿಗಳ ಜಲಾನಯನ ಪ್ರದೇಶಗಳಲ್ಲಿ ನೀರಿನ ಮಟ್ಟ ಹೆಚ್ಚಾದಾಗ ಸಾರ್ವಜನಿಕರಲ್ಲಿ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು, ಸೂಚನಾ ಫಲಕಗಳನ್ನು ಅಳವಡಿಸಿ ಜಾಗೃತಿ ಮೂಡಿಸುವುದು, ನೀರಾವರಿಯ ಪ್ರದೇಶಗಳನ್ನು ಜಲಾಶಯಗಳ ಸಂಗ್ರಹಣೆಗೆ ತಕ್ಕಂತೆ ನೀರಾವರಿ ಯೋಜನೆಗಳನ್ನು ಮಾಡಿ ನೀರಿನ ಸದುಪಯೋಗ ಮಾಡಿಕೊಳ್ಳುವುದು, ನೀರನ್ನು ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಕೃಷಿಗೆ, ಕುಡಿಯಲು, ಜಲವಿದ್ಯುತ್ ಯೋಜನೆಗಳಿಗೆ ಬಳಸಿಕೊಳ್ಳುವುದು, ಸ್ವಾಭಾವಿಕವಾದ ಜಲ ಮೂಲಗಳನ್ನು ರಕ್ಷಿಸುವುದು, ಜಲಮಾಲಿನ್ಯವಾಗದಂತೆ ಸಂರಕ್ಷಣೆ ಮಾಡುವುದರೊಂದಿಗೆ ನೀರಿನ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸುವ ಪ್ರಯತ್ನಗಳು ಆಡಳಿತ ಸರ್ಕಾರಗಳು ಮಾಡಬೇಕು.

**ಪರಾಮರ್ಶನಗಳು**


- James Campbell. (1884). *Gazetteer of the Bombay Presidency: Belgaum*, Government Central Press, Bombay,
- ಕರ್ನಾಟಕ ಸರ್ಕಾರ. (1987). *ಬೆಳಗಾವಿ ಜಿಲ್ಲಾ ಗೆಜೆಟಿಯರ್.* ಮುದ್ರಣ ಮತ್ತು ಲೇಖನ ಸಾಮಗ್ರಿ ಇಲಾಖೆ.
- Rice, B.L. (1877). *Gazetteer of Mysore and Coorg*, Bangalore Government Press.
- ಚಿದಾನಂದಮೂರ್ತಿ, ಎಂ. (1979), *ಕನ್ನಡ ಅಧ್ಯಯನಗಳ ಸಾಂಸ್ಕೃತಿಕ ಅಧ್ಯಯನ*, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ

**ಕೊನೆಟಿಪ್ಪಣಿಗಳು :**

---

[1] ಡಿ.ಬಿ.ನಾಯಕ,(2017), ಕರ್ನಾಟಕ ಗ್ರಾಮ ಚರಿತ್ರೆ ಕೋಶ ಬೆಳಗಾವಿ ಭಾಗ 1 ಮತ್ತು 2, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ

[2] ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ 2023–24, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಬೆಳಗಾವಿ

[3] *PMKSY, District Irrigation Plan Belgaum District*, Department of Agriculture, Belagavi

[4] ಚಿದಾನಂದಮೂರ್ತಿ ಎಂ.,(1979), ಕನ್ನಡ ಅಧ್ಯಯನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ

[5] ಕ್ಷೇತ್ರಕಾರ್ಯ, (ದಿನಾಂಕ 06/09/20250) ಸತ್ಯಪ್ಪ ಸಣ್ಮನಿ, ವರ್ಕ್ ಇನ್ಸೆಕ್ಟರ್ , ಹಿಡಕಲ್ ಡ್ಯಾಂ,

[6] *PMKSY, District Irrigation Plan Belgaum District*, Department of Agriculture, Belagavi